# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 1) ಶ್ರೀ ಅನಂತಯ್ಯ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ 2) ಶ್ರೀ ಎಸ್ ಜಿ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ 5) ಶ್ರೀ ಕುಮತಿರಾಮಯ್ಯ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ 6) ಶ್ರೀ ಕೃಷ್ಣಾಬಾಯಿ ವಿಟ್ಟಲ ಭಂಡಾರಿ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧದ ಪ್ರಕರಣದ ಕುರಿತು.

**ಓದಲಾಗಿದೆ:**

1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ: ಕಂಪ್ಲೇಂಟ್/ಉಪಲೋಕ್/ಬಿಡಿ/2829/2016/ಎಆರ್‌ಎಲ್‌ಓ-2, ದಿನಾಂಕ: 10-07-2017.
2. ಮಾನ್ಯ ಉಪಲೋಕಾಯುಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ/2829/2016/ಸನಿಕಾಸ-2, ದಿನಾಂಕ: 22-06-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 22-06-2017 ರ ವರದಿಯಲ್ಲಿ ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತುಮಕುರು ಲೋಕಾಯುಕ್ತ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀ ಅನಂತಯ್ಯ, ಅಂದಿನ ಪಿಡಿಓ (2) ಶ್ರೀ ಹೆಚ್.ಎನ್.ನಾಗರಾಜು, ಅಂದಿನ ಅಧ್ಯಕ್ಷರು (3) ಶ್ರೀ ಎಸ್ ಜಿ ಶಿವಣ್ಣ, ಕಾರ್ಯದರ್ಶಿ (4) ಖಾಸಗಿ ವ್ಯಕ್ತಿ (5) ಶ್ರೀ ಕುಮತಿರಾಮಯ್ಯ, ಅಂದಿನ ಪಿಡಿಓ (6) ಶ್ರೀ ಕೃಷ್ಣಾಬಾಯಿ ವಿಟ್ಟಲ ಭಂಡಾರಿ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ ಕ್ರಮವಾಗಿ 1,3,5 ಮತ್ತು 6ನೇ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದುರ್ನಡತೆ ತೋರಿಸಿರುವುದಾಗಿ ವರದಿ ಸಲ್ಲಿಸಿದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿದಾಗ 1,3,5 ಮತ್ತು 6ನೇ ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ತಿಪಟೂರು ತಾಲ್ಲೂಕು ಈಚನೂರು ಗ್ರಾಮ ಪಂಚಾಯತಿಗೆ 2013-14ನೇ ಸಾಲಿನಲ್ಲಿ ಸರ್ಕಾರದಿಂದ 13ನೇ ಹಣಕಾಸು ಯೋಜನೆಯಡಿ ಮಂಜೂರಾಗಿರುವ ಹಣವನ್ನು 1,3,5 ಮತ್ತು 6ನೇ ಎದುರುದಾರರು ದಾಖಲೆಗಳನ್ನು ತಿದ್ದಿ, ಒಂದೇ ವೋಚರಿಗೆ ಎರಡೆರಡು ಬಾರಿ ಬಿಲ್ಲು ಮಂಜೂರು ಮಾಡಿ, ಖೊಟ್ಟೆ ದಾಖಲೆಗಳನ್ನು ಸೃಷ್ಟಿಸಿ ಹಣ ದುರುಪಯೋಗ ಪಡಿಸಿಕೊಂಡು ಭ್ರಷ್ಟಾಚಾರವೆಸಗಿ ಸರ್ಕಾರಕ್ಕೆ ಮೋಸಮಾಡಿದ್ದಾರೆಂದು ಆಪಾದಿಸಿ ಹೆಚ್.ಎ.ರವಿ ಬಿನ್ ಅನಂತಯ್ಯ ಅವರು ದೂರು ದಾಖಲಿಸಿದ್ದು, ಆ ಆಧಾರದ ಮೇಲೆ ತುಮಕೂರು ಲೋಕಾಯುಕ್ತ ಪೋಲಿಸ್ ಠಾಣೆಯ ಆರಕ್ಷಕ ನಿರೀಕ್ಷಕರು ಠಾಣೆಯಲ್ಲಿ ಮೊ.ಸಂ.20/2014 ರಂತೆ ಪಿ.ಸಿ.ಕಾಯ್ದೆ ಕಲಂ 8,13(1)(ಸಿ) ಸಹ ಕಲಂ 13(2) ರಂತೆ ಮತ್ತು 468, 420, ಸಹ ಕಲಂ 34ರ ಈ.ಪಿ.ಸಿ. ಅಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

ದಿನಾಂಕ:15.07.2014 ರಂದು ಬೆಳಿಗ್ಗೆ 9 ಗಂಟೆಗೆ ತನಿಖಾಧಿಕಾರಿಗಳು ಪಂಚ ಸಾಕ್ಷಿಗಳ ಸಮಕ್ಷಮ ಎದುರುದಾರರ ಕಛೇರಿಗೆ ಸ್ಥಳ ತನಿಖೆ ಹಾಗೂ ದಾಖಲಾತಿಗಳ ಪಂಚನಾಮೆ ಜರುಗಿಸಲು ಹೊರಟು ಬೆಳಿಗ್ಗೆ

11.30 ಗಂಟೆಗೆ ಶೋಧನಾ ವಾರಂಟಿನೊಂದಿಗೆ ಈಚನೂರು ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ಭೇಟಿ ನೀಡಿ ಅಲ್ಲಿ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ.

ತನಿಖಾಧಿಕಾರಿಗಳು ಮುಂದುವರೆದು ಪಂಚರ ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡು ಲಭ್ಯವಿದ್ದ ದಾಖಲಾತಿಗಳು ಹಾಗೂ ಹೇಳಿಕೆಗಳ ಆಧಾರದ ಮೇಲೆ 1,3,5 ಮತ್ತು 6ನೇ ಎದುರುದಾರರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು 2013-14ನೇ ಸಾಲಿನ 13ನೇ ಹಣಕಾಸಿನ ಯೋಜನೆಯಡಿಯಲ್ಲಿ ದಿ:01.04.2013 ರಿಂದ 31.03.2014 ರವರೆಗೆ ಯಾವುದೇ ಸಾಮಗ್ರಿಗಳನ್ನು ಖರೀದಿಸದೆ, ಅವ್ಯವಹಾರ ನಡೆಸಿ ಒಟ್ಟು 2,78,305/- ರೂಪಾಯಿಗಳ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು ರುಜುವಾತಾಗಿದೆಯೆಂದು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು 1,3,5 ಮತ್ತು 6ನೇ ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

1,3,5 ಮತ್ತು 6ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಲ್ಲಿಸಿ ತಾವು ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದು, ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಬೇಕೆಂದು ಕೋರಿದ್ದಾರೆ. ಕಡತದಲ್ಲಿನ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳು ಅವರ ಮೇಲಿನ ಆಪಾದನೆಗಳನ್ನು ಅಲ್ಲಗಳೆಯಲು ಹಾಗೂ ಅವರ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸಲು ಸಮಂಜಸವಾಗಿರುವುದಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಈಗಾಗಲೇ ತನಿಖಾಧಿಕಾರಿಗಳು ಈ ಪ್ರಕರಣದ ಬಗ್ಗೆ ಸಂಪೂರ್ಣ ತನಿಖೆ ಮಾಡಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಅದರ ಒಂದು ಪ್ರತಿಯನ್ನು ಈ ಪ್ರಕರಣದಲ್ಲಿ ಸಲ್ಲಿಸಿರುವುದರಿಂದ 1,3,5 ಮತ್ತು 6ನೇ ಎದುರುದಾರರು ಕರ್ತವ್ಯ ದುರುಪಯೋಗಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದ್ದರಿಂದ 1,3,5 ಮತ್ತು 6ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಎದುರುದಾರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) ಅಡಿಯಲ್ಲಿ ದುರ್ನಡತೆ/ದುರ್ವತನೆ ಕಂಡು ಬಂದಿರುವುದರಿಂದ, ಸದರಿ ಎದುರುದಾರರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಎಂದು ತಿಳಿಸಿರುತ್ತಾರೆ ಹಾಗೂ ಎದುರುದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14-ಎ ರಡಿಯಲ್ಲಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/595/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:26-07-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1) ಶ್ರೀ ಅನಂತಯ್ಯ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು 2) ಶ್ರೀ ಎಸ್ ಜಿ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು 5) ಶ್ರೀ ಕುಮತಿರಾಮಯ್ಯ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು 6) ಶ್ರೀ ಕೃಷ್ಣಾಬಾಯಿ ವಿಟ್ಟಲ ಭಂಡಾರಿ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 594 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
6. ಶ್ರೀ ಅನಂತಯ್ಯ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
7. ಶ್ರೀ ಎಸ್ ಜಿ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
8. ಶ್ರೀ ಕುಮತಿರಾಮಯ್ಯ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
9. ಶ್ರೀ ಕೃಷ್ಣಾಬಾಯಿ ವಿಟ್ಟಲ ಭಂಡಾರಿ, ಅಂದಿನ ಪಿಡಿಓ, ಈಚನೂರು ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
11. ಗಣಕ ಕೋಶ.

29/8/17